# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2237

ಸದಸ್ಯರ ಹೆಸರು : ಶ್ರೀ ರಮೇಶ್ ಬಾಬು(ನಾಮನಿರ್ದೇಶನ ಹೊಂದಿರುವವರು)

ಉತ್ತರಿಸಬೇಕಾದ ದಿನಾಂಕ : 26.03.2026.

ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯ ಪೊಲೀಸ್ ಇಲಾಖೆಯಲ್ಲಿ ಗನ್‌ಮ್ಯಾನ್ ಒದಗಿಸುವ ಕುರಿತು ಇರುವ ನಿಯಮಾವಳಿಗಳು ಏನು; ಒಟ್ಟು ಎಷ್ಟು ಗನ್‌ಮ್ಯಾನ್‌ಗಳನ್ನು ರಾಜ್ಯದಲ್ಲಿ ಒದಗಿಸಲಾಗಿದೆ; (ವಿವರಗಳನ್ನು ಒದಗಿಸುವುದು) | ಅಂಗರಕ್ಷಕ ಭದ್ರತೆಯನ್ನು ಕೇಂದ್ರ ಗೃಹ ಮಂತ್ರಾಲಯ / ರಾಜ್ಯ ಸರ್ಕಾರದಿಂದ ಹೊರಡಿಸುವ ಭದ್ರತಾ ಮಾರ್ಗಸೂಚಿಗಳನ್ವಯ ಹಾಗೂ ಬೆದರಿಕೆ ಸ್ವರೂಪ / ಬೆದರಿಕೆ ಗ್ರಹಿಕೆಯ ಆಧಾರದ ಮೇರೆಗೆ ಬೆದರಿಕೆ ನಿರ್ಧರಣಾ ವರದಿ ಆಧರಿಸಿ ಅಂಗರಕ್ಷಕ ಭದ್ರತೆಯನ್ನು ಸರ್ಕಾರದ ವರ್ಗೀಕೃತ ಭದ್ರತಾ ಪುನರ್ ವಿಮರ್ಶನಾ ಸಮಿತಿ ಮತ್ತು ರಾಜ್ಯ ಅಂಗರಕ್ಷಕ ಭದ್ರತಾ ಪುನರ್ ವಿಮರ್ಶನಾ ಸಮಿತಿ ಪರಿಶೀಲಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತದೆ.<br><br>ಸ್ಥಳೀಯ ಪರಿಸ್ಥಿತಿ ಹಾಗೂ ಬೆದರಿಕೆಯ ಸ್ವರೂಪಕ್ಕೆ ಅನುಗುಣವಾಗಿ ಸಮಿತಿಯ ನಿರ್ಣಯದ ನಿರೀಕ್ಷೆಯಲ್ಲಿ ಅಂಗರಕ್ಷಕ ಭದ್ರತೆಯನ್ನು ಒದಗಿಸಲಾಗುತ್ತದೆ.<br><br>ಕೆಲವು ಸಂದರ್ಭಗಳಲ್ಲಿ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ನಗರ / ಜಿಲ್ಲಾ ಪೊಲೀಸ್ ಘಟಕದಿಂದ ಭದ್ರತೆಯನ್ನು ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಭದ್ರತೆಯನ್ನು ಒದಗಿಸಲಾಗುತ್ತದೆ.<br><br>ರಾಜ್ಯದಲ್ಲಿ ಒಟ್ಟು **1050** ಸಂಖ್ಯೆಯ ಅಂಗರಕ್ಷಕರನ್ನು ಒದಗಿಸಲಾಗಿದೆ.<br><br>ಸದರಿ ಪ್ರಕ್ರಿಯೆ ನಿಯತಕಾಲಿಕವಾಗಿದ್ದು, ಬೆದರಿಕೆ ನಿರ್ಧರಣಾ ವರದಿಗಳನ್ನು ಆಧರಿಸಿ, ಅಂಗರಕ್ಷಕ ಭದ್ರತೆಯನ್ನು ಒದಗಿಸುವ / ಮುಂದುವರೆಸುವ / ಹೆಚ್ಚಿಸುವ / ಹಿಂಪಡೆಯುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ಅದೇ ರೀತಿ ವರ್ಗೀಕೃತ ಭದ್ರತೆಗೆ ಸಂಬಂಧಿಸಿದಂತೆ ಸಹ ಕ್ರಮ ಕೈಗೊಳ್ಳಲಾಗುವುದು.<br><br>ವಿವರ ಕುರಿತು, ರಕ್ಷಣೆಗೊಳಪಟ್ಟ ವ್ಯಕ್ತಿಗಳ ಭದ್ರತಾ ಹಿತದೃಷ್ಟಿಯಿಂದ ಈ ವಿಷಯದಲ್ಲಿ ಗೌಪ್ಯತೆಯನ್ನು ಕಾಪಾಡುವುದು ಅಗತ್ಯವಾಗಿರುತ್ತದೆ. |
| ಆ | ರಾಜ್ಯದಲ್ಲಿರುವ ಎಷ್ಟು ಐಎಎಸ್, ಐಪಿಎಸ್, ಐಎಫ್‌ಎಸ್ ಮತ್ತು ಇತರೆ ಉನ್ನತ ಅಧಿಕಾರಿಗಳಿಗೆ ರಾಜ್ಯ ಸರ್ಕಾರ ಗನ್‌ಮ್ಯಾನ್‌ಗಳನ್ನು ಒದಗಿಸಿರುತ್ತದೆ; (ಪೂರ್ಣ ವಿವರಗಳನ್ನು ಒದಗಿಸುವುದು) | ರಾಜ್ಯದಲ್ಲಿ ಒಟ್ಟು **115** ಐಎಎಸ್, ಐಎಫ್‌ಎಸ್ ಮತ್ತು ಇತರೆ ಉನ್ನತ ಅಧಿಕಾರಿಗಳಿಗೆ ನಗರ / ಜಿಲ್ಲಾ ಪೊಲೀಸ್ ಘಟಕದಿಂದ ಅಂಗರಕ್ಷಕ ಭದ್ರತೆ ಒದಗಿಸಲಾಗಿದೆ.<br><br>ಕೇಂದ್ರ ಗೃಹ ಮಂತ್ರಾಲಯ / ರಾಜ್ಯ ಸರ್ಕಾರದಿಂದ ಹೊರಡಿಸುವ ಭದ್ರತಾ ಮಾರ್ಗಸೂಚಿಗಳನ್ವಯ ಹಾಗೂ ಬೆದರಿಕೆ ಸ್ವರೂಪ / ಬೆದರಿಕೆ ಗ್ರಹಿಕೆಯ ಆಧಾರದ ಮೇರೆಗೆ ಬೆದರಿಕೆ ನಿರ್ಧರಣಾ ವರದಿ ಆಧರಿಸಿ ಸರ್ಕಾರದ ವರ್ಗೀಕೃತ ಭದ್ರತಾ ಪುನರ್ ವಿಮರ್ಶನಾ ಸಮಿತಿ ಮತ್ತು ರಾಜ್ಯ ಅಂಗರಕ್ಷಕ ಭದ್ರತಾ ಪುನರ್ ವಿಮರ್ಶನಾ ಸಮಿತಿ |

| | | |
|---|---|---|
| | | ಪರಿಶೀಲಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತದೆ.<br><br>ಪೊಲೀಸ್ ಇಲಾಖೆಯ ಐಪಿಎಸ್ ಅಧಿಕಾರಿಗಳಿಗೆ ಹಾಗೂ ಉನ್ನತ ಮಟ್ಟದ ಪೊಲೀಸ್ ಅಧಿಕಾರಿಗಳಿಗೆ ವೈರ್ ಲೆಸ್ ಸಂವಹನಕ್ಕಾಗಿ ((ವಾಕಿ-ಟಾಕಿ) ಮೂಲಕ ಬರುವ ಸಂದೇಶವನ್ನು ಸ್ವೀಕರಿಸಲು) ಪೊಲೀಸ್ ಸಿಬ್ಬಂದಿಗಳನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿರುತ್ತದೆ.<br>ಕೆಲವು ಸಂದರ್ಭಗಳಲ್ಲಿ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಕಾನೂನು ಸುವ್ಯವಸ್ಥೆ ಕಾಪಾಡುವ ಹಿತದೃಷ್ಠಿಯಿಂದ ಶಾಂತಿ ಸಭೆ, ಗಸ್ತು ಕರ್ತವ್ಯ, ಬಂದೋಬಸ್ತ್ ಕರ್ತವ್ಯ ನಿರ್ವಹಿಸುವ ಸಮಯದಲ್ಲಿ ಕೆಲವೊಮ್ಮೆ ಸಮಾಜಘಾತುಕ ವ್ಯಕ್ತಿಗಳಿಂದ ಬೆದರಿಕೆ / ಹಲ್ಲೆಗಳುಂಟಾಗುವ ಸಾಧ್ಯತೆ ಇದ್ದು, ಆದ್ದರಿಂದ ನಗರ / ಜಿಲ್ಲಾ ಪೊಲೀಸ್ ಘಟಕದಿಂದ ಅಂಗರಕ್ಷಕ ಭದ್ರತೆಯನ್ನು ಒದಗಿಸಲಾಗುತ್ತದೆ. |
| ಇ | ರಾಜ್ಯ ಸರ್ಕಾರಿ ನೌಕರರಿಗೆ ಗನ್ ಮ್ಯಾನ್‌ಗಳನ್ನು ಒದಗಿಸಲು ನಿಯಮಾವಳಿಗಳಲ್ಲಿ ಅವಕಾಶ ಇದೆಯೇ; ಸರ್ಕಾರ ರಾಜ್ಯದ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳಿಗೆ ಅಥವಾ ಸರ್ಕಾರಿ ನೌಕರರಿಗೆ ಗನ್‌ಮ್ಯಾನ್‌ಗಳನ್ನು ಒದಗಿಸಿದೆಯೇ; (ಒದಗಿಸಿದ್ದಲ್ಲಿ, ಅವರ ಪೂರ್ಣ ವಿವರಗಳನ್ನು ಮತ್ತು ಯಾವ ಕಾರಣಕ್ಕೆ ಗನ್ ಮ್ಯಾನ್‌ಗಳನ್ನು ಒದಗಿಸಲಾಗಿದೆ ಎಂಬುದರ ಮಾಹಿತಿ ಒದಗಿಸುವುದು) | ಕೇಂದ್ರ ಗೃಹ ಮಂತ್ರಾಲಯ / ರಾಜ್ಯ ಸರ್ಕಾರದಿಂದ ಹೊರಡಿಸುವ ಭದ್ರತಾ ಮಾರ್ಗಸೂಚಿಗಳನ್ವಯ ಹಾಗೂ ಬೆದರಿಕೆ ಸ್ವರೂಪ / ಬೆದರಿಕೆ ಗ್ರಹಿಕೆಯ ಆಧಾರದ ಮೇರೆಗೆ ಬೆದರಿಕೆ ನಿರ್ಧರಣಾ ವರದಿ ಆಧರಿಸಿ ಅಂಗರಕ್ಷಕ ಭದ್ರತೆಯನ್ನು ಸರ್ಕಾರದ ವರ್ಗೀಕೃತ ಭದ್ರತಾ ಪುನರ್ ವಿಮರ್ಶನಾ ಸಮಿತಿ ಮತ್ತು ರಾಜ್ಯ ಅಂಗರಕ್ಷಕ ಭದ್ರತಾ ಪುನರ್ ವಿಮರ್ಶನಾ ಸಮಿತಿ ಪರಿಶೀಲಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತದೆ.<br><br>ರಾಜ್ಯದ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳಿಗೆ ಅಥವಾ ಸರ್ಕಾರಿ ನೌಕರರಿಗೆ ಅಂಗರಕ್ಷಕ ಭದ್ರತೆ ಒದಗಿಸಿರುವುದಿಲ್ಲ. |
| ಈ | ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಅಧಿಕಾರಿಗಳಿಗೆ ರಾಜ್ಯ ಸರ್ಕಾರ ಗನ್ ಮ್ಯಾನ್‌ಗಳನ್ನು ಒದಗಿಸಿದೆಯೇ; (ಒದಗಿಸಿದ್ದಲ್ಲಿ, ಅವರ ಮಾಹಿತಿಯನ್ನು ಮತ್ತು ಪದನಾಮದ ಸಹಿತವಾಗಿ ಒದಗಿಸುವುದು) | ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಕಾನೂನು ಸುವ್ಯವಸ್ಥೆ ಕಾಪಾಡುವ ಹಿತದೃಷ್ಠಿಯಿಂದ ಶಾಂತಿ ಸಭೆ, ಗಸ್ತು ಕರ್ತವ್ಯ, ಬಂದೋಬಸ್ತ್ ಕರ್ತವ್ಯ ನಿರ್ವಹಿಸುವಾಗ ನಗರ / ಜಿಲ್ಲಾ ಪೊಲೀಸ್ ಘಟಕದಿಂದ ಅಂಗರಕ್ಷಕ ಭದ್ರತೆಯನ್ನು ಒದಗಿಸಲಾಗುತ್ತದೆ.<br><br>ಜಿಲ್ಲಾ ಮಟ್ಟದಲ್ಲಿ ಒಟ್ಟು **93** ಜಿಲ್ಲಾ ಅಧಿಕಾರಿಗಳಿಗೆ ಅಂಗರಕ್ಷಕ ಭದ್ರತೆ ಒದಗಿಸಲಾಗಿದೆ. |
| ಉ | ಕರ್ನಾಟಕದಲ್ಲಿ ವಿಐಪಿಗಳು, ಸರ್ಕಾರಿ ಅಧಿಕಾರಿಗಳು ಹಾಗೂ ಸರ್ಕಾರಿ ನೌಕರರನ್ನು ಹೊರತುಪಡಿಸಿ ಇತರೆ ಖಾಸಗಿ ವ್ಯಕ್ತಿಗಳಿಗೆ ಗನ್ ಮ್ಯಾನ್‌ಗಳನ್ನು ಒದಗಿಸಲಾಗಿದೆಯೇ?<br>(ಒದಗಿಸಿದ್ದಲ್ಲಿ ಕಾರಣ ಸಹಿತವಾಗಿ ಪೂರ್ಣ ವಿವರಗಳನ್ನು ಒದಗಿಸುವುದು). | ಒಟ್ಟು **53** ಖಾಸಗಿ ವ್ಯಕ್ತಿಗಳಿಗೆ ಅಂಗರಕ್ಷಕ ಭದ್ರತೆಯನ್ನು ಒದಗಿಸಲಾಗಿದೆ.<br><br>ಬೆದರಿಕೆ ಸ್ವರೂಪ / ಬೆದರಿಕೆ ಗ್ರಹಿಕೆಯ ಆಧಾರದ ಮೇರೆಗೆ ಬೆದರಿಕೆ ನಿರ್ಧರಣಾ ವರದಿ ಆಧರಿಸಿ ಸರ್ಕಾರ ವರ್ಗೀಕೃತ ಭದ್ರತಾ ಪುನರ್ ವಿಮರ್ಶನಾ ಸಮಿತಿ ಮತ್ತು ಅಂಗರಕ್ಷಕ ಭದ್ರತಾ ಪುನರ್ ವಿಮರ್ಶನಾ ಸಮಿತಿ ಪರಿಶೀಲಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತದೆ.<br><br>ಸ್ಥಳೀಯ ಪರಿಸ್ಥಿತಿ ಬೆದರಿಕೆಯ ಸ್ವರೂಪಕ್ಕೆ ಅನುಗುಣವಾಗಿ ಸಮಿತಿಯ ನಿರ್ಣಯದ ನಿರೀಕ್ಷೆಯಲ್ಲಿ ಅಂಗರಕ್ಷಕ ಭದ್ರತೆಯನ್ನು ಒದಗಿಸಲಾಗುತ್ತದೆ. |

ಹೆಚ್‌ಡಿ 108 ಪಿಸಿಇ 2026

**(ಡಾ: ಜಿ.ಪರಮೇಶ್ವರ)**
ಗೃಹ ಸಚಿವರು